ಸಂಕೇತವಾಗಿದ್ದರೆ, ಹಳದಿಯು ಜಯವನ್ನು ಸಂಕೇತಿಸುತ್ತಿತ್ತು. ಇದರ ಮಧ್ಯೆ ವಜ್ರವನ್ನು ಸಂಕೇತಿಸುವ ಚಿಹ್ನೆ ಇತ್ತು. ಈ ಚಿಹ್ನೆಯನ್ನು ಬೌದ್ಧಧರ್ಮದಿಂದ ತೆಗೆದುಕೊಳ್ಳಲಾಗಿದ್ದು, ಬಂಗಾಳಿ ಭಾಷೆಯಲ್ಲಿ 'ವಂದೇ ಮಾತರಂ' ಬರೆಯಲಾಗಿತ್ತು. ಬಾವುಟದ ಅಂಚಿನ ಸುತ್ತ 101 ಪ್ರಜ್ವಲಿಸುವ ದೀಪದ ಆಕೃತಿಗಳೂ ಅದರಲ್ಲಿದ್ದವು' ಎಂದು ವಿವರಿಸುತ್ತಾ ಹೋದೆ.

'ಮತ್ತೆ ಈಗ ನಮ್ಮ ಬಾವುಟ ಬೇರೆ ಇದೆಯಲ್ಲಪ್ಪ...' ತಲೆ ಕೆರೆದುಕೊಳ್ಳುತ್ತಾ ಕೇಳಿದಳು ಮಗಳು.

'ಈಗಿರುವ ಬಾವುಟಕ್ಕೂ ಮೊದಲೇ ಹಲವು ಬಾರಿ ನಮ್ಮ ಧ್ವಜ ಚೇಂಜ್ ಆಗಿದೆ ಮಗಳೇ... ಸ್ವದೇಶಿ ಚಳವಳಿ ಆಗ ಜೋರಾಗಿತ್ತು. ಬಂಗಾಳ ವಿಭಜನೆ ಆದ ನಂತರ, 1906ರ ಆಗಸ್ಟ್ 7ರಂದು ಕೋಲ್ಕತ್ತದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಪಾರ್ಸಿ ಬಗಾನ್ ಸ್ಕೇರ್‌ನ ಗ್ರೀನ್ ಪಾರ್ಕ್‌ನಲ್ಲಿ ನಡೆದ ಆ ಅಧಿವೇಶನದಲ್ಲಿ ಹೊಸ ರಾಷ್ಟ್ರಧ್ವಜವೊಂದನ್ನು ಮೊದಲ ಬಾರಿಗೆ ಹಾರಿಸಲಾಯಿತು. ಅದು ಆಯತಾಕಾರದ ತ್ರಿವರ್ಣ ಧ್ವಜ. ಮೇಲಿನ ಪಟ್ಟಿಯಲ್ಲಿ ಹಸಿರು ಬಣ್ಣದಲ್ಲಿ ಎಂಟು ಕಮಲಗಳಿದ್ದವು, ಮಧ್ಯದಲ್ಲಿ ಹಳದಿ ಬಣ್ಣದ ಪಟ್ಟಿಯ ಮೇಲೆ ದಟ್ಟ ನೀಲಿ ಬಣ್ಣದಲ್ಲಿ, ಹಿಂದಿಯಲ್ಲಿ 'ವಂದೇ ಮಾತರಂ' ಎಂದು ಬರೆಯಲಾಗಿತ್ತು. ಕೆಳಗೆ ಕೆಂಪು ಪಟ್ಟಿಯಲ್ಲಿ ಎಡಗಡೆಗೆ ಅರ್ಧ ಚಂದ್ರಾಕೃತಿ ಮತ್ತು ಬಲಗಡೆಗೆ ಸೂರ್ಯನ ಚಿಹ್ನೆಯನ್ನು ಬಿಳಿ ಬಣ್ಣದಲ್ಲಿ ಬರೆಯಲಾಗಿತ್ತು' ವಿವರಿಸಿದೆ.

'ಒಂದೊಂದು ಬಾರಿ ರಾಷ್ಟ್ರಧ್ವಜ ರೂಪಿಸುವಾಗಲೂ ಒಂದೊಂದು ಕಥೆ ಇತ್ತೇನಪ್ಪ...' ಮಗಳಿಂದ ಮತ್ತೆ ಕುತೂಹಲದ ಪ್ರಶ್ನೆ.

'ಹೌದಮ್ಮ... ಈ ಅಧಿವೇಶನ ನಡೆದು ಮರುವರ್ಷವೇ, ವಿದೇಶದಲ್ಲಿಯೂ ಭಾರತದ್ದು ಎನ್ನಲಾದ ಧ್ವಜವು ಆಗಲೇ ಹಾರಾಡಿತ್ತು...'

'ಹೌದೇನಪ್ಪ!' ಅಚ್ಚರಿಯಿಂದ ಕೇಳಿದಳು ಪುತ್ರಿ.

'ಹೌದು ಮಗಳೇ. ಬ್ರಿಟಿಷರ ವಿರುದ್ಧ ಹೋರಾಡಿದ್ದ ಕೆಲವು ಕ್ರಾಂತಿಕಾರಿಗಳನ್ನು ಗಡಿಪಾರು ಮಾಡಲಾಗಿತ್ತು. ಮೇಡಂ ಭಿಕಾಜಿ ಕಾಮಾ ನೇತೃತ್ವದಲ್ಲಿ, ವಿನಾಯಕ ದಾಮೋದರ್ ಸಾವರ್ಕರ್ ಮತ್ತು ಶಾಮ್‌ಜಿ ಕೃಷ್ಣ ಶರ್ಮಾ ಎಂಬ ಕ್ರಾಂತಿಕಾರಿಗಳು, 1907ರ ಆಗಸ್ಟ್ 22ರಂದು ಜರ್ಮನಿಯ ಬರ್ಲಿನ್‌ನಲ್ಲಿ ಧ್ವಜ ಹಾರಿಸಿದರು. ಆ ಮೂಲಕ, ವಿದೇಶಿ ನೆಲದಲ್ಲಿ ಮೊದಲ ಬಾರಿಗೆ ನಮ್ಮ ದೇಶದ ಧ್ವಜ ಹಾರಾಡಿತ್ತು. ಇದನ್ನು ಬರ್ಲಿನ್ ಸಮಿತಿ ಧ್ವಜ ಎಂದೂ ಕರೆಯಲಾಯಿತು. ಅದು ಕೂಡ ತ್ರಿವರ್ಣ ಧ್ವಜವಾಗಿತ್ತು. ಮೇಲಿನ ಕೇಸರಿ ಬಣ್ಣದ ಪಟ್ಟಿಯಲ್ಲಿ ಎಂಟು ನಕ್ಷತ್ರಗಳಿದ್ದರೆ, ಅದರ ನಂತರದ ಹಳದಿ ಪಟ್ಟಿಯಲ್ಲಿ ಹಿಂದಿಯಲ್ಲಿ ವಂದೇ ಮಾತರಂ ಎಂದು ಬರೆಯಲಾಗಿತ್ತು. ಮೂರನೇ ಪಟ್ಟಿ ಹಸಿರು ಬಣ್ಣ ಹೊಂದಿದ್ದು, ಬಿಳಿ ಬಣ್ಣದಲ್ಲಿ ಸೂರ್ಯ ಮತ್ತು ಅರ್ಧಚಂದ್ರಾಕೃತಿಯ ಮೇಲೆ ನಕ್ಷತ್ರವಿರುವ ಚಿತ್ರವಿತ್ತು' ಎಂದು ವಿವರಿಸಿದೆ.

'ಅದೇ ಬಾವುಟ ಮುಂದುವರಿತೇನಪ್ಪ...'

'ಇಲ್ಲ, ಇದಾಗಿ ಸುಮಾರು 10 ವರ್ಷಗಳ ನಂತರ, ನಮ್ಮ ದೇಶದಲ್ಲಿ ಹೋಂ ರೂಲ್ ಚಳವಳಿ ಶುರುವಾಗಿತ್ತು. ಅಂದರೆ, ನಮ್ಮನ್ನು ನಾವೇ ಆಳಿಕೊಳ್ಳುತ್ತೇವೆ ಅಂತಾ... ಆ ಸಂದರ್ಭದಲ್ಲೊಂದು ಧ್ವಜ ರೂಪುಗೊಂಡಿತು. ಲೋಕಮಾನ್ಯ ಬಾಲಗಂಗಾಧರ ತಿಲಕ್ ಹಾಗೂ ಡಾ. ಅನಿಬೆಸೆಂಟ್ ಇದನ್ನು ರೂಪಿಸಿದರು. ಒಂದಾದ ನಂತರ ಒಂದರಂತೆ, ಐದು ಕೆಂಪು ಮತ್ತು ನಾಲ್ಕು ಹಸಿರು ಪಟ್ಟಿಯನ್ನು ಹೊಂದಿದ್ದ ಧ್ವಜ. ಸಪ್ತಋಷಿಗಳ ಸಂಕೇತವಾಗಿ ಏಳು ನಕ್ಷತ್ರಗಳೂ ಇದರಲ್ಲಿದ್ದವು. ಧ್ವಜದ ಬಲ ಮೇಲ್ಭಾಗದಲ್ಲಿ ಅರ್ಧಚಂದ್ರಾಕೃತಿ ಮತ್ತು ನಕ್ಷತ್ರವು ಬಿಳಿ ಬಣ್ಣದಲ್ಲಿದ್ದರೆ, ಎಡ ಮೇಲ್ಭಾಗದಲ್ಲಿ ಇಂಗ್ಲೆಂಡ್‌ನ ರಾಷ್ಟ್ರಧ್ವಜದ ಚಿತ್ರವಿತ್ತು.'




ರಾಷ್ಟ್ರಧ್ವಜ ವಿನ್ಯಾಸದ ಕೀರ್ತಿಗೆ ಭಾಜನರಾದ ಪಿಂಗಳಿ ವೆಂಕಯ್ಯ

'ಅಯ್ಯೋ, ಮತ್ಯಾಕೆ ಇಂಗ್ಲೆಂಡ್ ಫ್ಲ್ಯಾಗ್ ಇರೋ ಬಾವುಟವನ್ನೇ ಹಾರಿಸಿದ್ರಪ್ಪ...'

'ದೇಶ ಸಂಪೂರ್ಣವಾಗಿ ಸ್ವತಂತ್ರಗೊಳ್ಳದೇ ಇರುವುದರಿಂದಲೂ ಈ ರೀತಿಯ ಬಾವುಟ ರೂಪಿಸಿರಬಹುದು ಮಗಳೇ, ಅದು ನನಗೆ ಸರಿಯಾಗಿ ಗೊತ್ತಿಲ್ಲ. ಆದರೆ, ಈ ಕಾರಣದಿಂದಲೇ 1921ರಲ್ಲಿ ಬೇರೆ ಧ್ವಜವನ್ನು ರೂಪಿಸಲಾಯಿತು. 1921ರಲ್ಲಿ ವಿಜಯವಾಡದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಇದನ್ನು ಹಾರಿಸಲಾಯಿತು...'

'ಆ ಬಾವುಟ ಹೇಗಿತ್ತಪ್ಪ, ಅದನ್ನು ಯಾರು ಡಿಸೈನ್ ಮಾಡಿದ್ದು.'

'ಸ್ವಾತಂತ್ರ್ಯ ಹೋರಾಟಗಾರರಾದ ಆಂಧ್ರಪ್ರದೇಶದ ಪಿಂಗಾಳಿ ವೆಂಕಯ್ಯ ಅವರು ಇದನ್ನು ರೂಪಿಸಿದ್ದರು ಮಗಳೇ. ಐದು ವರ್ಷಗಳಲ್ಲಿ 50 ದೇಶಗಳ ಬಾವುಟವನ್ನು ಅಧ್ಯಯನ ಮಾಡಿ ಅವರು ಇದನ್ನು ವಿನ್ಯಾಸಗೊಳಿಸಿದ್ದರು. ಅದು ಕೆಂಪು ಮತ್ತು ಹಸಿರು ಬಣ್ಣದ ಬಾವುಟವಾಗಿತ್ತು. ಈ ಎರಡು ಬಣ್ಣಗಳು, ದೇಶದ ಎರಡು ಪ್ರಮುಖ ಸಮುದಾಯಗಳನ್ನು ಪ್ರತಿನಿಧಿಸುತ್ತಿತ್ತು. ಕೆಂಪು ಹಿಂದೂಗಳನ್ನು ಪ್ರತಿನಿಧಿಸಿದರೆ, ಹಸಿರು ಮುಸ್ಲಿಮರನ್ನು ಪ್ರತಿನಿಧಿಸುವಂತಿತ್ತು.'

'ಹಾಗಾದರೆ, ಆಗ ನಮ್ಮಲ್ಲಿ ಬರೀ ಹಿಂದೂ ಮತ್ತು ಮುಸ್ಲಿಮರು ಅಷ್ಟೇ ಇದ್ರೇನಪ್ಪ...'

'ನಿನ್ನ ಪ್ರಶ್ನೆ ಚೆನ್ನಾಗಿದೆ ಪುಟ್ಟ. ಇದೇ ಪ್ರಶ್ನೆಯನ್ನು ಹಲವರು ಆಗ ಮುಂದಿಟ್ಟರು. ಆಗ, ಮಹಾತ್ಮ ಗಾಂಧೀಜಿ, ಹಿಂದೂ–ಮುಸ್ಲಿಂ ಜೊತೆಗೆ, ಇತರೆ ಧರ್ಮಗಳನ್ನೂ ಪ್ರತಿನಿಧಿಸುವ ರೀತಿಯಲ್ಲಿ ಬಿಳಿ ಬಣ್ಣವನ್ನು ಸೇರಿಸಿ ಎಂದು ಸಲಹೆ ನೀಡಿದರು. ಉಳಿದ ಸಮುದಾಯಗಳ ಪ್ರತೀಕವಾಗಿ ಬಿಳಿ ಬಣ್ಣದ ಪಟ್ಟಿಯನ್ನು ಧ್ವಜಕ್ಕೆ ಸೇರಿಸಲಾಯಿತು. ಅಲ್ಲದೆ, ಈ ಬಾವುಟದ ಮಧ್ಯದಲ್ಲಿ, ಗಾಂಧೀಜಿಯವರು ಖಾದಿಯನ್ನು ಪ್ರತಿಪಾದಿಸಿದ ಸಂಕೇತವಾಗಿ ಚರಕವನ್ನು ಹಾಕಲಾಗಿತ್ತು. ಇದು, ದೇಶದ ಪ್ರಗತಿಯನ್ನು ಸಾಂಕೇತಿಸುವಂತಿತ್ತು ಪುಟ್ಟ.'

'ಆಮೇಲೆ...'

'ಪಿಂಗಾಳಿ ವೆಂಕಯ್ಯ ಅವರು ರೂಪಿಸಿದ್ದ ಧ್ವಜದ ಬಗ್ಗೆ, 1931ರಲ್ಲಿ ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಚರ್ಚೆ ನಡೆಯಿತು. ಬಣ್ಣಗಳನ್ನು ಧರ್ಮಗಳಿಗೆ ಪ್ರಾತಿನಿಧಿಕ ಎಂದು ಹೇಳದೆ, ದೇಶದ ಒಟ್ಟಾರೆ ಪ್ರಗತಿ, ಭವಿಷ್ಯವನ್ನು ಬಿಂಬಿಸುವಂತಿರಬೇಕು ಎಂದು ತೀರ್ಮಾನಿಸಲಾಯಿತು. ಅಲ್ಲದೆ, ಈ ಮೊದಲಿನ ಬಾವುಟದಲ್ಲಿದ್ದ ಕೆಂಪು ಬಣ್ಣಕ್ಕೆ ಬದಲಾಗಿ, ಕೇಸರಿ ಬಣ್ಣವನ್ನು ಬಳಸಲಾಯಿತು. ಮೂರು ಪಟ್ಟಿಯ ಆರೋಹಣ ಕ್ರಮವನ್ನೂ ಬದಲಿಸಲಾಯಿತು. ಅಲ್ಲದೆ, ಧ್ವಜದಲ್ಲಿ ಚರಕದ ಬದಲು, ಅಶೋಕ ಚಕ್ರ ಬಂದಿತು.'

'ಅಂದ್ರೆ, ಆಗ ಯಾವ ಬಣ್ಣ, ಏನು ಪ್ರತಿನಿಧಿಸುತ್ತಿತ್ತು ಅಪ್ಪ...'

'ಮೇಲಿನ ಕೇಸರಿ ಬಣ್ಣ ಶಕ್ತಿ ಮತ್ತು ಧೈರ್ಯವನ್ನು ಸಂಕೇತಿಸಿದರೆ, ಎರಡನೇ ಪಟ್ಟಿಯಲ್ಲಿನ ಬಿಳಿ ಬಣ್ಣ ಶಾಂತಿ ಮತ್ತು ಸತ್ಯವನ್ನು ಸೂಚಿಸುವಂತಿತ್ತು. ಮೂರನೇ ಪಟ್ಟಿಯಲ್ಲಿದ್ದ ಹಸಿರು ಬಣ್ಣ, ಸಮೃದ್ಧಿ, ಪ್ರಗತಿ ಮತ್ತು ಈ ನೆಲದ ಪಾವಿತ್ರ್ಯವನ್ನು ಸಂಕೇತಿಸುತ್ತಿತ್ತು.'

'ಮತ್ತೆ ಅಶೋಕ ಚಕ್ರ ?'

'ಅಶೋಕ ಚಕ್ರದಲ್ಲಿನ 24 ಗೆರೆಗಳು, ಸ್ವಾತಂತ್ರ್ಯ ಹೋರಾಟದಲ್ಲಿನ ಜನ ಜೀವನ ಮತ್ತು ದೇಶಕ್ಕಾಗಿ ಸತತವಾಗಿ ಹೋರಾಡಿ ವೀರಮರಣವನ್ನಪ್ಪಿದವರ ಸಂಕೇತ ಎಂದು ಹೇಳಲಾಯಿತು.'